ದಿನಾಂಕಃ 20/09/2025 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣೀಕರಿಸಲಾಯಿತು.

ಪಾಟೀ ಸವಾಲು ಃ ವಾದಿ ಪರ ಶ್ರೀ ಆರ್ ಜಿ ಕೆ ವಕೀಲರಿಂದಃ

3. ನಾನು 2 ನೇ ತರಗತಿಯವರೆಗೆ ಓದಿದ್ದೇನೆ. ನನಗೆ ಓದಲು ಮತ್ತು ಬರೆಯಲು ಸ್ವಲ್ಪ ಸ್ವಲ್ಪ ಬರುತ್ತದೆ. ಸಂಗಪ್ಪನಿಗೆ ಒಬ್ಬ ಗಂಡು ಮಗ ಮತ್ತು ಇಬ್ಬರು ಹೆಣ್ಣು ಮಕ್ಕಳು. ಸಿದ್ಧಲಿಂಗಪ್ಪನಿಗೆ ಐದು ಜನ ಗಂಡು ಮಕ್ಕಳು ಮತ್ತು ಇಬ್ಬರು ಹೆಣ್ಣು ಮಕ್ಕಳು. ಸಿದ್ಧಲಿಂಗಪ್ಪ ತನ್ನ ಎಲ್ಲ ಮಕ್ಕಳ ಮೇಲೆ ಪ್ರೀತಿ ಹಾಗೂ ವಾತ್ಸಲ್ಯದಿಂದ ಇದ್ದ ಎಂದರೆ ಸರಿ. ಸಾಕ್ಷಿ ಸ್ವತಃ ಮಂಜುನಾಥನ ಮೇಲೆ ವಿಶೇಷ ಹೇಳುತ್ತಾರೆ ದಾನ ಪತ್ರವನ್ನು ಸರ್ವೇ ನಂಬರ 164/6 ಕ್ಷೇತ್ರ 1 ಎಕರೆ 18 ಗುಂಟೆ ದಕ್ಷಿಣ ಭಾಗದ ಸ್ವತ್ತಿನ ಸಂಬಂಧ ಬರೆಯಲಾಗಿತ್ತು. ಮಂಜುನಾಥನ ಮೇಲೆ ವಿಶೇಷ ಪ್ರೀತಿ ಇತ್ತು ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಸರ್ವೇ ನಂಬರ 164/6 ಸಿದ್ಧಲಿಂಗಪ್ಪನಿಗೆ ಯಾವಾಗ ಮತ್ತು ಹೇಗೆ ಬಂತು ಎಂದರೆ ಗೊತ್ತಿಲ್ಲ. ಆದರೆ ಅದು ಆತನ ಸ್ವಂತ ಜಮೀನು. ಆ ಸಂಬಂಧ ದಾಖಲೆ ನೋಡಿದ್ದೀರಾ ಎಂದರೆ ಇಲ್ಲ. ಸದರಿ ಸ್ವತ್ತು ಆತನ ಕುಟುಂಬದ ಪಿತ್ರಾರ್ಜಿತ ಸ್ವತ್ತು ಎಂದರೆ ಗೊತ್ತಿಲ್ಲ. ಬಕ್ಷೀಸ್ ಪತ್ರ ಮಾಡುವಾಗ ಸಿದ್ಧಲಿಂಗಪ್ಪನಿಗೆ ಸುಮಾರು 80 ವರ್ಷ ವಯಸ್ಸಾಗಿತ್ತು. ಸಿದ್ಧಲಿಂಗಪ್ಪನಿಗೆ ವಯಸ್ಸಾದ ಕಾರಣ ಕಣ್ಣು ಸರಿಯಾಗಿ ಕಾಣುತ್ತಿರಲಿಲ್ಲ ಮತ್ತು ಅಡ್ಡ್ಯಾಡಲು ಆಗುತ್ತಿರಲಿಲ್ಲ ಎಂದರೆ ಸರಿಯಲ್ಲ. 7 ಎಕರೆ 10 ಗುಂಟೆ ಜಮೀನನ್ನು ಸಿದ್ಧಲಿಂಗಪ್ಪ ಹಾಗೂ ಆತನ ಎಲ್ಲ ಮಕ್ಕಳು ಕೂಡಿಯೇ ಸಾಗುವಳಿ ಮಾಡುತ್ತಿದ್ದರು ಎಂದರೆ ನನಗೆ ಗೊತ್ತಿಲ್ಲ. ಕೂಡಿ ಇದ್ದಾಗ ಮಾಡಿರಬಹುದು. ಈ ಆಸ್ತಿಯ ಕಾಗದ ಪತ್ರವನ್ನು ನೋಡಿದ್ದೀರಾ ಎಂದರೆ ನನಗೆ ಗೊತ್ತಿಲ್ಲ. ಸಿದ್ಧಲಿಂಗಪ್ಪ ಹಾಗೂ ಆತನ ಮಕ್ಕಳ ನಡುವೆ 7 ಎಕರೆ 10 ಗುಂಟೆ ಜಮೀನಿನ ಸಂಬಂಧ ಯಾವುದೇ ವಾಟ್ನಿ ಆಗಿಲ್ಲ ಎಂದರೆ ಗೊತ್ತಿಲ್ಲ. ಇಲ್ಲಿಯವರೆಗೂ ಸಿದ್ಧಲಿಂಗಪ್ಪನಿಗೆ ಈ ಆಸ್ತಿ ಹೇಗೆ ಬಂತು ಎಂದು ತಿಳಿದುಕೊಂಡಿದ್ದೀರಾ ಎಂದರೆ ಗೊತ್ತಿಲ್ಲ. ಸಿದ್ಧಲಿಂಗಪ್ಪ ನಾನು ಹೇಳುವ ಸಮಯದಲ್ಲಿ ಮಾನಸಿಕವಾಗಿ ಹಾಗೂ ದೈಹಿಕವಾಗಿ ಸರಿ ಇರಲಿಲ್ಲ ಎಂದರೆ ಸುಳ್ಳು. ಸದರಿ ದಾನ ಪತ್ರವನ್ನು ಗುಡಗೇರಿಯ ಹಿರೇಗೌಡರೆ ಬರೆದಿರುತ್ತಾರೆ. ಸ್ಟ್ಯಾಂಪನ್ನು ಯಾರು ತಂದರು ಗೊತ್ತಿಲ್ಲ. ಹಿರೇಗೌಡರ ಕೈಯಲ್ಲಿ ಕೊಟ್ಟಿದ್ದರು. ಬರೆಯುವುದು ಹಾಗೂ ಬೆರಳಚ್ಚು ಮಾಡಿಸುವುದು ಎಂದರೆ ಗೊತ್ತು. ಒಟ್ಟು ಕುಟುಂಬದ ಆಸ್ತಿ ಸಂಬಂಧ ದಾನ ಪತ್ರ ಮಾಡಲು ಸಿದ್ಧಲಿಂಗಪ್ಪನಿಗೆ ಅಧಿಕಾರ ಇರಲಿಲ್ಲ ಎಂದರೆ ಸರಿಯಲ್ಲ. ಸಿದ್ಧಲಿಂಗಪ್ಪ ದಾನ ಪತ್ರ ಮಾಡುವ ಪರಿಸ್ಥಿತಿಯಲ್ಲಿರಲಿಲ್ಲ, ನಾನು, ಮುಲ್ಲಾ, ಸಂಗಪ್ಪ

ಮತ್ತು ಮಂಜುನಾಥ ಇವರೆಲ್ಲರೂ ಕೂಡಿಕೊಂಡು ದಾನ ಪತ್ರ ಸೃಷ್ಟಿಸಿದ್ದೇವೆ ಎಂದರೆ ಸರಿಯಲ್ಲ. ಪ್ರಮಾಣ ಪತ್ರ ತಯಾರಿಸಲು ಮಾಹಿತಿಯನ್ನು ನಾನು ಕೊಟ್ಟಿರುತ್ತೇನೆ. ಚಕಬಂದಿ ಬರೆಸಿದ್ದೀರಾ ಎಂದರೆ ಇಲ್ಲ. ಸಹಿ ಮಾಡಿದ್ದು ಬಿಟ್ಟರೇ ಚಕಬಂದಿ ಗೊತ್ತಿಲ್ಲ. ನಾವೆಲ್ಲರೂ ಸೇರಿ ಖೊಟ್ಟಿ ಪತ್ರ ಸೃಷ್ಟಿಸಿ ಮಂಜುನಾಥ ಮತ್ತು ಸಂಗಪ್ಪನ ಮಾತು ಕೇಳಿ ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

ಪಾಟೀ ಸವಾಲು ಃ **7** ರಿಂದ **9** ನೇ ಪ್ರತಿವಾದಿ ಪರ ಶ್ರೀ ಎನ್ ವಾಯ್ ಪಿ ವಕೀಲರಿಂದಃ

4. ನಾನು ಆರು ವರ್ಷಗಳ ಹಿಂದೆ ಕುಂದಗೋಳಕ್ಕೆ ಬಂದಿದ್ದೆ. ದಿನಾಂಕ ನೆನಪಿಲ್ಲ. ಕುಂದಗೋಳಕ್ಕೆ ಬರಲು ನನ್ನನ್ನು ಸಿದ್ಧಲಿಂಗಪ್ಪ ಮತ್ತು ಮಂಜುನಾಥ ಕರೆದಿರುತ್ತಾರೆ. ಯಾರು ನನ್ನನ್ನು ಕರೆದಿಲ್ಲ ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

ಉಳಿದ ಪಾಟೀ ಸವಾಲು ಃ ವಾದಿ ಪರ ವಕೀಲರು ಮಾಡಿದ ಪಾಟೀ ಸವಾಲನ್ನೇ ಅಳವಡಿಸಿಕೊಳ್ಳುತ್ತಾರೆ.

ಮರು ವಿಚಾರಣೆ ಃ ಇಲ್ಲ.

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿ ಹೇಳಿದಂತೆ ನನ್ನ ಉಖ್ತುಲೇಖನಕ್ಕೆ ಬೆರಳಚ್ಚು ಮಾಡಲಾಯಿತು.)

ಓ ಹೇ ಕೆ ಸರಿ ಇದೆ

Sd/-

ಹಿರಿಯ ದಿವಾಣಿ ನ್ಯಾಯಾಧೀಶರು,

ಕುಂದಗೋಳ.